ಹೊಸ ಪ್ರಥಮ ದರ್ಜೆ ಕಾಲೇಜು ಸ್ಥಾಪನೆ

589(800), ಶ್ರೀ ಬಣಕಾರ್ ಯು.ಬಿ. (ಹಿರೇಕೆರೂರು)

ಅ) 2014–15ನೇ ಸಾಲಿನಲ್ಲಿ ಹೊಸದಾಗಿ ಸರ್ಕಾರವು ಎಷ್ಟು ಬಾರಿ ಪ್ರಥಮ ದರ್ಜೆ ಕಾಲೇಜುಗಳನ್ನು ತೆರೆಯಲು ಉದ್ದೇಶಿಸಿದೆ; (ವಿವರ ನೀಡುವುದು).

ಶ್ರೀ ಆರ್.ವಿ.ದೇಶಪಾಂಡೆ (ಮಾನ್ಯ ಉನ್ನತ ಶಿಕ್ಷಣ ಸಚಿವರು)

ಆ) ಪ್ರಸ್ತಾವನೆಗಳನ್ನು ಪರಿಶೀಲಿಸಲಾಗುತ್ತಿದೆ.

2013–14ನೇ ಸಾಲಿಗೆ ವಸತಿ ಯೋಜನೆಗಳು

590(801), ಶ್ರೀ ಬಣಕಾರ್ ಯು.ಬಿ. (ಹಿರೇಕೆರೂರು)

ಅ) 2013–14ನೇ ಸಾಲಿಗೆ ವಸತಿ ಯೋಜನೆಗಳನ್ನು ತಾಲ್ಲೂಕುವಾರು ನಿಗದಿಪಡಿಸಿದ ಗುರಿ ಎಷ್ಟು;

ಆ) ದಿನಾಂಕ:31.03.2014ರವರೆಗೆ ತಾಲ್ಲೂಕುವಾರು ಸಾಧಿಸಿದ ಪ್ರಗತಿ ಎಷ್ಟು?

ಶ್ರೀ ಡಾ.ಎಂ.ಹೆಚ್.ಅಂಬರೀಷ್ (ವಸತಿ ಸಚಿವರು)

ಅ) 2013–14ನೇ ಶ್ರೇಣಿಯಲ್ಲಿ ಬಸವ ವಸತಿ ಯೋಜನೆಯಡಿ ಪ್ರತಿ ಗ್ರಾಮ ಪಂಚಾಯಿತಿಗೆ 20 ಮನೆಗಳಂತೆ ಒಟ್ಟು ರಾಜ್ಯಕ್ಕೆ 1,12,560 ಮನೆಗಳನ್ನು ಹಾಗೂ ವಾಜಪೇಯಿ ನಗರ ವಸತಿ ಯೋಜನೆಯಡಿ 20,000 ಮನೆಗಳ ಗುರಿಯನ್ನು ನಿಗದಿಪಡಿಸಲಾಗಿದ್ದು, (ಪ್ರತಿ ಮಹಾನಗರ ಪಾಲಿಕೆಗೆ 250; ಪಟ್ಟಣ ಪಂಚಾಯತ್ 40; ಪುರಸಭೆ 75; ನಗರಸಭೆ 125; ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ 1000 ಮನೆಗಳು), ಇಂದಿರಾ ಆವಾಸ್ ಯೋಜನೆಯಡಿ 2001ರ ಜನಗಣತಿ ಆಧಾರದ ಮೇಲೆ ಗ್ರಾಮ ಪಂಚಾಯತಿವಾರು